**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಸಿ ವಿ ಎಸ್., ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಯು ಕನ್ನಡ ಭಾಷೆ ಬರುವುದಿಲ್ಲ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದರಿಂದ ಕನ್ನಡ ಮತ್ತು ತೆಲುಗು ಭಾಷೆ ತಿಳಿದಿರುವ ಶ್ರೀ ಆರ್ ಎಂ ಎಸ್., ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು. ಭಾಷಾ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**2.** ಈ ದಾವೆಯನ್ನು ನಾನು ಏನೂ ಪರಿಹಾರ ಕೇಳಿ ಸಲ್ಲಿಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯೂ ಭೂಮಿಯನ್ನು ನೊಂದಣಿ ಮಾಡಿಸಿಕೊಡುತ್ತೇವೆಂದು ಹೇಳಿ ತಪ್ಪಿದಕ್ಕೆ ಈ ದಾವೆಯನ್ನು ಸಲ್ಲಿಸಿದ್ದೇನೆಂದು ನುಡಿಯುತ್ತಾರೆ.

**3.** ನನ್ನ ಸ್ವಂತ ಊರು ಚಿತ್ತೂರು ಜಿಲ್ಲೆಯ, ವಿ.ಕೋಟಾ ಮಂಡಲಂ ನ ಜವನಪಲ್ಲಿ ಗ್ರಾಮ. ನಮ್ಮ ಊರಿನಲ್ಲಿ ನನಗೆ ಸೇರಿದ 2 ಎಕರೆ ಜಮೀನು ಇರುತ್ತದೆ. ಸದರಿ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿವೆ. ಸದರಿ ಜಮೀನಿನಲ್ಲಿ ಟಮೋಟೋ, ಬಿನ್ಸ್ ಬೆಳೆಗಳನ್ನು ಬೆಳೆಯುತ್ತೇವೆ. ನನ್ನ ತಂದೆಗೆ ನಾನು ಹಾಗೂ ನನ್ನ ತಮ್ಮ ವಿನೋದ್ ಕುಮಾರ್ ಇಬ್ಬರು ಮಕ್ಕಳು ಇರುತ್ತೇವೆ. ಮೇಲಿನ ಜಮೀನುಗಳಿಂದ ನಮಗೆ ವಾರ್ಷಿಕವಾಗಿ 30-40 ಸಾವಿರ ಹಾಗೂ 1 ಲಕ್ಷದವರೆಗೆ ಆದಾಯ ಇರುತ್ತದೆ. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡಿಕೊಂಡು ಅದರೊಂದಿಗೆ ನಾನು ವೆಲ್ಡಿಂಗ್ ಕೆಲಸ ಮಾಡುತ್ತೇನೆ. ವೆಲ್ಡಿಂಗ್ ಕೆಲಸದಿಂದ ನನಗೆ ವಾರ್ಷಿಕವಾಗಿ 20-30 ಸಾವಿರ ರೂಪಾಯಿ ಆದಾಯ ಬರುತ್ತದೆ.

**4.** 1 ನೇ ಪ್ರತಿವಾದಿ ವೆಂಕಟಪ್ಪನನ್ನು ನಾನು ದೊಮ್ಮಸಂದ್ರದಲ್ಲಿ ನೋಡಿದ್ದೇನೆ. 1 ಮತ್ತು 2 ನೇ ಪ್ರತಿವಾದಿಯವರಿಬ್ಬರು ದೊಮ್ಮಸಂದ್ರ ಗ್ರಾಮದಲ್ಲಿರುತ್ತಾರೆ . ಸದರಿಯವರು ನನಗೆ ನಮ್ಮ ಊರಿಗೆ ಬಂದು ಹೋಗುತ್ತಿದ್ದರಿಂದ ಪರಿಚಯವಾಗಿರುತ್ತಾರೆ. ಸದರಿಯವರು ನಮ್ಮ ಊರಿನ ಸುಬ್ರಮಣಿ ಎಂಬುವವರ ಮನೆಗೆ ಬರುತ್ತಿದ್ದರು. ಜಮೀನು ಮಾರಾಟಕ್ಕೆ ಇದೆ ಎಂದು 2 ನೇ ಪ್ರತಿವಾದಿ ತಿಳಿಸಿರುತ್ತಾರೆ. ದಿ. 06.1.2021 ರಂದು ಜಮೀನು ಮಾರಾಟಕ್ಕೆ ಇದೆ ಎಂದು ತಿಳಿಸಿರುತ್ತಾರೆ. ಅದೇ ದಿನ ಉಪ ನೊಂದಾಣಾಧಿಕಾರಗಳ ಕಚೇರಿಯ ಬಳಿ ವ್ಯಾಪಾರ ಮಾಡಿರುತ್ತೇನೆ. ವ್ಯಾಪಾರದ ಮಾತುಕತೆ ವೇಳೆ ಲಕ್ಷ್ಮಿನಾರಾಯಣಪ್ಪ, ವೆಂಕಟೇಶಪ್ಪ, ವೆಂಕಟಪ್ಪ

ಹಾಗೂ ನರಸಿಂಹಪ್ಪ ಇದ್ದರು. ಅವರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಸದರಿ ಮಾತುಕತೆಯ ವೇಳೆ ಭೂಮಿ ಪತ್ರಗಳನ್ನು ನೋಡಿರುತ್ತೇನೆ. ನಾನು ಯಾವ ದಾಖಲೆಗಳನ್ನು ನೋಡಿ ವ್ಯಾಪಾರ ಮಾಡಿರುತ್ತೇನೆಂದರೆ ಸಾಕ್ಷಿಯೂ ಆ ದಾಖಲೆಗಳನ್ನು ಈಗ ತೋರಿಸಿದರೆ ನೋಡಿ ಹೇಳುತ್ತೇನೆಂದು ನುಡಿಯುತ್ತಾರೆ.

**5.** ನಾನು ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಳ್ಳುವ ಪೂರ್ವದಲ್ಲಿ ಅಥವಾ ಮಾತುಕತೆಯ ವೇಳೆಯಲ್ಲಿ ದಾಖಲೆಗಳನ್ನು ನೋಡಿಲ್ಲ ಎಂದರೆ ಸಾಕ್ಷಿಯೂ ನೋಡಿರುತ್ತೇನೆ ನರಸಿಂಹಪ್ಪ ಹಾಗೂ ವೆಂಕಟಪ್ಪನ ಹೆಸರಿನಲ್ಲಿ ನಮೂದು ಇದ್ದವೂ ಎಂದ ನುಡಿಯುತ್ತಾರೆ. ನರಸಿಂಹಪ್ಪನ ಹೆಸರಿನಲ್ಲಿ 2 ಎಕರೆ 20 ಗುಂಟೆ ಜಮೀನು ಇತ್ತು. ವೆಂಕಟಪ್ಪನ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ನಮೂದು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯೂ ಇಬ್ಬರೂ ತಂದೆ ಮಕ್ಕಳು ಅವರಿಬ್ಬರ ಹೆಸರಿನಲ್ಲಿ ನಮೂದು ಇತ್ತು ಎಂದು ನುಡಿಯುತ್ತಾರೆ.

**6.** ಸದರಿ 2 ಎಕರೆ 20 ಗುಂಟೆ ಜಮೀನು ನರಸಿಂಹಪ್ಪನಿಗೆ ಯಾವ ರೀತಿ ಬಂತ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೇ ನಂ. 154/1 ಎಂದು ಇರುತ್ತದೆ. ದಾವಾ ಆಸ್ತಿಯ ಹಳೇ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯೂ ತೋರಿಸಿದರೆ ಗುರುತಿಸುತ್ತೇನೆಂದು ನುಡಿಯುತ್ತಾರೆ. ಕ್ರಯದ ಕರಾರು ಆಗುವ ಕಾಲಕ್ಕೆ ನಾನು ಜಮೀನಿನ ದಾಖಲೆಗಳನ್ನು ತೆಗೆದುಕೊಂಡಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಕ್ರಯದ ಕರಾರು ಪತ್ರ ಆಗುವ ಕಾಲಕ್ಕೆ ವ್ಯಾಜ್ಯದ ಜಮೀನಿನ ಯಾವುದೇ ದಾಖಲೆಗಳನ್ನು ನಾನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ಸರ್ವೇ ನಂ. 154/1 ರ ಹಳೇ ಸರ್ವೇ ನಂ. 62 ಎಂದು ಇರುತ್ತದೆ ಎಂದರೆ ಸಾಕ್ಷಿಯೂ ಸರ್ವೇ ನಂ. 154/1 ರ ದಾಖಲೆಯನ್ನು ಮಾತ್ರ ನನಗೆ ತೋರಿಸಿದ್ದು ಎಂದು ನುಡಿಯುತ್ತಾರೆ.

**7.** ವ್ಯಾಜ್ಯದ ಜಮೀನು 1 ನೇ ಪ್ರತಿವಾದಿ ವೆಂಕಟಪ್ಪನಿಗೆ 1982 ನೇ ಇಸವಿಯಲ್ಲಿ ದರ್ಖಾಸ್ತು ಮೂಲಕ ಮಂಜೂರಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ವೆಂಕಟಪ್ಪ ಎಸ್ ಸಿ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಎಸ್ ಸಿ ಜನಾಂಗದವರಿಗೆ ಮಂಜೂರಾದ ಜಮೀನು ಮಾರಾಟ ಮಾಡಲು ನಿಷೇದವಿರುವ ಕಾನೂನು ತಿಳುವಳಿಕೆ ನನಗೆ ಇರುವುದಿಲ್ಲ.

**8.** ಕ್ರಯದ ಕರಾರು ನೊಂದಣಿಯಾದ ದಿನ ನಾನು ಸಂಪೂರ್ಣ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ವ್ಯಾಪಾರ ಮಾತುಕತೆಯಲ್ಲಿ ಮೊದಲು 14 ಲಕ್ಷ ವ್ಯಾಪಾರ ಹೇಳಿ ಮಧ್ಯದಲ್ಲಿ ಇಬ್ಬರು ಬಂದು 15 ಲಕ್ಷಕ್ಕೆ ಏರಿಸಿದರು. ಮಧ್ಯದಲ್ಲಿ ಬಂದಂತಹ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ, ಕಾರಣ 4-5 ಜನ ಇದ್ದರೂ. ನಾನು 13 ವರೆ ಲಕ್ಷ ರೂಪಾಯಿಗೆ ಕೇಳಿರುತ್ತೇನೆ. ವ್ಯಾಜ್ಯದ ಜಮೀನಿನಲ್ಲಿ ಟಮೋಟೋ ಹಾಗೂ ಹಸಿಮೆಣಸಿನಕಾಯಿ ಬೆಳೆಯುತ್ತಿದ್ದರು. ವ್ಯಾಜ್ಯದ ಜಮೀನನ್ನು ನಾನು ನೋಡಿದ್ದೇನೆ. ವ್ಯಾಜ್ಯದ ಜಮೀನು ವಿಸ್ತೀರ್ಣ ಎಷ್ಟು ಇರುತ್ತವೆ ಎಂದರೆ ಸಾಕ್ಷಿಯೂ 2 ಎಕರೆ 20 ಗುಂಟೆ ಇದ್ದು ಅದಲ್ಲದೇ ಪ್ರತಿವಾದಿಯವರಿಗೆ ಸೇರಿದ ಇನ್ನೂ ಬೇರೆ ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ.

**9.** ಕ್ರಯದ ಕರಾರು ಪತ್ರವನ್ನು ಪ್ರತಿವಾದಿಗಳೇ ವಕೀಲರಿಗೆ ಹೇಳಿ ತಯಾರು ಮಾಡಿಸಿರುತ್ತಾರೆ. ನೊಂದಣಿಗೆ ಬೇಕಾದ ಚಲನ್ ನನ್ನು ಪ್ರತಿವಾದಿಯವರೇ ಕಟ್ಟಿರುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಏನೂ ಬರೆದಿದೆ ಎಂದು ನನಗೆ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯೂ ನೊಂದಣಿ ಮಾಡಿಸಿಕೊಡುವ ಬಗ್ಗೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ಎಂದಿಗೂ ಕ್ರಯದ ಕರಾರು ಪತ್ರವನ್ನು ಟೈಪ್ ಮಾಡಿಸಿ ನಾನು ಹೇಳುವಂತೆ ನೊಂದಣಿ ಚಲನ್ ನನ್ನು ಕಟ್ಟಿ ನೊಂದಣಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರಿಗೆ 70 ವರ್ಷ ವಯಸ್ಸಾಗಿದ್ದು ಅವರಿಗೆ ಓದು ಬರಹ ಬರುವುದಿಲ್ಲ ಎಂದರೆ ಸಾಕ್ಷಿಯೂ ಅವರ ಮಗ ಹೇಗೆ ಹೇಳುತ್ತಾರೋ ಹಾಗೇ ಅವರು ಮಾಡುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಗೂ ಸಹ ಓದು ಬರಹ ಇಲ್ಲ ಎಂದರೆ ಸರಿಯಲ್ಲ.

**10.** ಆ ದಿನ ಉಪನೊಂದಣಾದಿಕಾರಿಗಳ ಕಚೇರಿಗೆ ನಾನು, ಪ್ರತಿವಾದಿಗಳು, ಲಕ್ಷ್ಮಿನಾರಾಯಣಪ್ಪ ಹಾಗೂ ವೆಂಕಟೇಶಪ್ಪ ರವರು ಬೆಳಿಗ್ಗೆ 10.30 ರಿಂದ 11 ಗಂಟೆಯ ಒಳಗೆ ಹೋಗಿರುತ್ತೇವೆ. ಸಾಕ್ಷಿದಾರ ವೆಂಕಟೇಶಪ್ಪ ಮಲ್ಲನಾಯಕನಳ್ಳಿಯವರು. ಸದರಿಯವರು ವ್ಯವಸಾಯ ಮಾಡುತ್ತಾರೆ. ಸದರಿ ವೆಂಕಟೇಶಪ್ಪ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ವೆಂಕಟೇಶಪ್ಪನ ಜೊತೆ ನಾನು ಹಣದ ವ್ಯವಹಾರ ಮಾಡಿರುವುದಿಲ್ಲ. ಪ್ರತಿವಾದಿಯವರು ವ್ಯವಸಾಯ ಸಲುವಾಗಿ ಸಾಕ್ಷಿದಾರ ವೆಂಕಟೇಶಪ್ಪನಿಂದ 2 ಲಕ್ಷ ಸಾಲ ತೆಗೆದುಕೊಂಡಿದ್ದು ಸಾಲದ ಭದ್ರತೆಗೆ ಪತ್ರವನ್ನು ಬರೆಸಿಕೊಳ್ಳುವ ಬದಲಾಗಿ ನನ್ನ ಹೆಸರಿನಲ್ಲಿ ಸದರಿ ವೆಂಕಟೇಶಪ್ಪ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**11.** 2 ನೇ ಪ್ರತಿವಾದಿ ನರಸಿಂಹಪ್ಪ ಪ್ರತಿ ತಿಂಗಳು ನನಗೆ ಬಡ್ಡಿ ಪಾವತಿಸುತ್ತಿದ್ದು ನಾನು ಅದನ್ನು ಸಾಕ್ಷಿದಾರ ವೆಂಕಟೇಶಪ್ಪನಿಗೆ ಕೊಡುತ್ತೇನೆಂದರೆ ಸರಿಯಲ್ಲ. ನನಗೆ 14 ಲಕ್ಷ ಹಣ ಕೊಟ್ಟು ಕ್ರಯ ಮಾಡಿಸಿಕೊಳ್ಳುವ ಹಣದ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನಗೆ 14 ಲಕ್ಷ ಹಣ ಬರುವ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ನಾನು ಆಂಧ್ರ ಪ್ರದೇಶದ ರಾಜ್ಯದವನಾಗಿರುವುದರಿಂದ ಅಲ್ಲಿಂದ ಇಲ್ಲಿಗೆ ಬಂದು ಕ್ರಯ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. 14 ಲಕ್ಷ ರೂಪಾಯಿಗಳನ್ನು ಯಾವ ಮೂಲದಿಂದ ಶೇಖರಣೆ ಮಾಡಿರುತ್ತೇನೆ ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸಾಕ್ಷಿಯೂ ಟಮೋಟೋ, ಬಿನ್ಸ್ ಬೆಳೆದು ಶೇಖರಣೆ ಮಾಡಿದ್ದೆ ಎಂದು ನುಡಿಯುತ್ತಾರೆ.

**12.** ನಾನು ಪ್ರತಿವಾದಿಗಳಿಗೆ ಕ್ರಯದ ಕರಾರು ಪತ್ರದಲ್ಲಿ ತೋರಿಸಿರುವ ಹಣವನ್ನು ಕೊಟ್ಟಿಲ್ಲ ಹಾಗೂ ಪ್ರತಿವಾದಿಯವರಿಗೆ ವ್ಯಾಜ್ಯದ ಜಮೀನಿಗೆ ಮಾರಾಟ ಮಾಡುವ ಯಾವುದೇ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ವ್ಯಾಜ್ಯ ಜಮೀನು ಹೊರತು ಪಡಿಸಿ ಬೇರೆ ಯಾವುದೇ ಜಮೀನು ಜೀವನ ನಡೆಸಲು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ತೆಗೆದುಕೊಂಡ ಸಾಲವನ್ನು ಮರುಪಾವತಿಸಲು ಯಾವಾಗಲೂ ಸಿದ್ಧರಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯವರು 2 ಲಕ್ಷ ಹಣವನ್ನು ವಾಪಸ್ಸ ಕೊಡಲು ಬಂದಾಗ ಜಮೀನು ಹೊಡೆಯುವ ಉದ್ದೇಶದಿಂದ ನಾವು ಅದನ್ನು ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.